

ಹೊಡೆದು ಓಡಿಸಿದ್ದೇನೆ. ಅದು ಬಿದ್ದು ಕಾಲು ಮುರಿದುಕೊಂಡಿದೆ' 'ಈಗ ನನ್ನ ಗಂಡನನ್ನು ವಂಚಿಸಿ ಇನ್ನೊಬ್ಬ ಗಂಡಸಿನೊಂದಿಗೆ ದೈಹಿಕ ಸಂಬಂಧ ಮಾಡಿದ್ದೇನೆ. ನಾನು ವ್ಯಭಿಚಾರಿಣಿ' 'ನಾನು ಈಗ ಒಂದು ದೊಡ್ಡ ಗೂಳಿಯ ಜನ್ಮ ಹೊಂದಿ ಹತ್ತಾರು ಜನರಿಗೆ ತಿವಿದು ಗಾಯಗೊಳಿಸಿದ್ದೇನೆ' 'ನಾನು ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡೆ... ಆತ್ಮಹತ್ಯೆ ಮಹಾ ಪಾಪ..'

ಕೆಲವು ಸಲ ಈ ಡೆಮೋಗಳಲ್ಲಿ ಚಿಕಿತ್ಸಕನೇ ವ್ಯಕ್ತಿಗೆ ಹಿಂದಿನ ಜನ್ಮದ ಯಾವ ವೃತ್ತಾಂತಗಳನ್ನು ಹೇಳಬೇಕೆಂದು ನೇರವಾಗಿ ಅಥವಾ ಪರೋಕ್ಷವಾಗಿ ವ್ಯಕ್ತಿಗೆ ಸೂಚಿಸಬಹುದು. ಹಿಪ್ನಾಟಿಕ್ ಸ್ಥಿತಿಯಲ್ಲಿ– **TRANS** ಸ್ಥಿತಿಯಲ್ಲಿ ವ್ಯಕ್ತಿ ಅದನ್ನು ತನ್ನದೇ ನಿಜ ಅನುಭವ ಎಂದು ವಿಶ್ವಾಸದಿಂದ ಹೇಳ ತೊಡಗುತ್ತಾನೆ.

ಹತ್ತರಲ್ಲಿ ಒಬ್ಬ, ಪುನರ್ಜನ್ಮ ಚಿಕಿತ್ಸೆಯಿಂದ ತನ್ನ ಕಾಯಿಲೆ ಹೋಯಿತೆಂದು ಹೇಳಬಹುದು. ಮನೋ ಸೂಚನೆಯಿಂದ, ನಂಬಿಕೆಯಿಂದ ಈ ಮಾತನ್ನು ಹೇಳಬಹುದು ಅಥವಾ ಚಿಕಿತ್ಸಕ ನಡೆಸುವ ಈ ಡೆಮೋ ಡ್ರಾಮಾದಲ್ಲಿ ಪಾತ್ರಧಾರಿಯಾಗಿ ಸುಳ್ಳು ವರದಿಯನ್ನು ಒಪ್ಪಿಸಬಹುದು! ಡೆಮೋ ನೋಡಿದ ಸಾವಿರಾರು ವೀಕ್ಷಕರಲ್ಲಿ ಕೆಲವರಾದರೂ ಪ್ರಭಾವಿತರಾಗಿ ಈ ಚಿಕಿತ್ಸಕನ ಅಂಗಡಿಯ ಬಾಗಿಲು ತಟ್ಟಿ, ನನಗೂ ಚಿಕಿತ್ಸೆ ಕೊಡಿ ಎಂದು ವಿನಂತಿಸಬಹುದು.

ಪುನರ್ಜನ್ಮದ ಚಿಕಿತ್ಸೆ ನೀಡಿ ಹಣ ಪಡೆದ ಚಿಕಿತ್ಸಕ, ನಕಾರಾತ್ಮಕ ಫಲಿತಾಂಶಕ್ಕೆ ಸಿದ್ಧ ಉತ್ತರವನ್ನು ನೀಡುತ್ತಾನೆ. 'ಚಿಕಿತ್ಸೆಯಿಂದ ನಿನ್ನ ಕಾಯಿಲೆ ವಾಸಿಯಾಗಲಿಲ್ಲವೇ, ಸಮಸ್ಯೆ ಪರಿಹಾರವಾಗಲಿಲ್ಲವೇ, ಯೋಚಿಸಬೇಡ. ಮತ್ತೊಮ್ಮೆ ಚಿಕಿತ್ಸೆ ಮಾಡೋಣ. ಇನ್ನೊಂದು ಜನ್ಮದ ನೆನಪು ಬರುವಂತೆ ಮಾಡುತ್ತೇನೆ. ಆಗ ನಿನಗೆ ಖಂಡಿತ ಗುಣವಾಗುತ್ತದೆ. ಆಗಲೂ ಆಗಲಿಲ್ಲ ಮತ್ತೊಂದು ಹಿಂದಿನ ಜನ್ಮಕ್ಕೆ ಹೋಗೋಣ' ಎನ್ನುತ್ತಾನೆ!

ಜನ್ಮ ಜನ್ಮಾಂತರ ಕರ್ಮಸಿದ್ಧಾಂತಗಳನ್ನು ಬಳಸಿಕೊಂಡು ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು, ಜನರನ್ನು ವಂಚಿಸುವ ಈ ಡೆಮೋ ಕಾರ್ಯಕ್ರಮಗಳು ನಿಲ್ಲಬೇಕು. ಮೋಸ ಹೋಗಲು ಸಿದ್ಧರಾಗಿರುವವರು ಇರುವತನಕ, ಮೋಸ ಮಾಡುವವರು ವಿಜೃಂಭಿಸುತ್ತಾರೆ. ಜನ ಸಾಮಾನ್ಯರು ಈ ಮೋಸದಾಟಕ್ಕೆ ಮರುಳಾಗಬಾರದು.

ಪುನರ್ಜನ್ಮ ಪ್ರಕರಣಗಳ ಬಗ್ಗೆ ಪ್ರಪಂಚದಾದ್ಯಂತ ವೈಜ್ಞಾನಿಕ ಸಂಶೋಧನೆಗಳು ನಡೆದಿವೆ, ನಡೆಯುತ್ತಿವೆ. ಪುನರ್ಜನ್ಮವಿದೆ ಎಂದು ಗಟ್ಟಿಯಾಗಿ ನಂಬಲು ಸಾಕ್ಷ್ಯಾಧಾರಗಳು ಸಾಲವು. ಆಸಕ್ತರು ಡಾ. ಸತ್ವಂತ್ ಪಸ್ರೀಚಾ ಅವರು ಬರೆದಿರುವ **"CLAIMS OF REINCARNATION: AN EMPIRICAL STUDY OF CASES IN INDIA"** ಪ್ರಕಾಶಕರು **HARMAN PUBLISING HOUSE–NEW DELHI** ಓದಬಹುದು.

## ಒಂದು ಪ್ರಕರಣ

ಗಂಡನೊಂದಿಗೆ ಮಲಗಲು ಭಯ, ಸೆಕ್ಸ್ ಎಂದರೆ ಭಯ ಎಂದು ತನ್ನಲ್ಲಿಗೆ ಕರೆತಂದ ಮಹಿಳೆಯನ್ನು ಒಬ್ಬ ಪುನರ್ಜನ್ಮ ಚಿಕಿತ್ಸಕ ಸಮ್ಮೋಹನಕ್ಕೆ ಒಳಪಡಿಸಿದ. ತನ್ನ ಒಂದು ಹಿಂದಿನ ಜನ್ಮದಲ್ಲಿ ಈಗಿನ ಗಂಡನೇ ನನ್ನ ಮೇಲೆ ಅತ್ಯಾಚಾರ ಮಾಡಿದ್ದ ಎಂದು ಆಕೆ ಹೇಳಿದಳು. ದಾಂಪತ್ಯ ಜೀವನ ಮಾಡಲು ಭಯ ಪಡಬೇಡ ಎಂದು ಚಿಕಿತ್ಸಕ ಸೂಚನೆ ಕೊಟ್ಟ. ಅವಳ ಭಯ ನಿವಾರಣೆಯಾಯಿತು, ಸಮಸ್ಯೆ ಪರಿಹಾರವಾಯಿತು. ವಾಸ್ತವದಲ್ಲಿ ಆಕೆ ಎರಡು ವರ್ಷಗಳ ಹಿಂದೆ ಗಂಡನ ಅಣ್ಣನಿಂದ ಅತ್ಯಾಚಾರಕ್ಕೆ ಒಳಗಾಗಿದ್ದಳು. ಇದು ಗಂಡನಿಗೆ ಗೊತ್ತಿರಲಿಲ್ಲ. ಗಂಡನೊಂದಿಗೆ ಮಲಗಬೇಕಾದರೆ ಅತ್ಯಾಚಾರದ ನೆನಪು ಅವಳನ್ನು ಕಾಡುತ್ತಿತ್ತು. ಚಿಕಿತ್ಸೆಯ ನಂತರ ಈ ನೆನಪು ಅವಳನ್ನು ಕಾಡಲಿಲ್ಲ.

## ಇನ್ನೊಂದು ಪ್ರಕರಣ

ಅಸಾಧ್ಯ ಬೆನ್ನು ನೋವೆಂದು ನರಳುತ್ತಿದ್ದ ಹೆಂಗಸು ಪುನರ್ಜನ್ಮ ಚಿಕಿತ್ಸಕನ ಬಳಿ ಹೋದಳು. ಎಕ್ಸ್‌ರೇ, ಎಂ.ಆರ್.ಐ. ಎಲ್ಲ ನಾರ್ಮಲ್. ಮೂರು ನಾಲ್ಕು ಜನ ಮೂಳೆ ತಜ್ಞರ ಬಳಿಗೆ ಹೋದರೂ ತನ್ನ ಬೆನ್ನು ನೋವು ವಾಸಿಯಾಗಿಲ್ಲ ಎಂದಳು. ಹಿಪ್ನಾಟಿಕ್ ಸ್ಥಿತಿಯಲ್ಲಿ 'ತಾನು ಒಬ್ಬ ಹಿರಿಯ ಹೆಂಗಸನ್ನು ಹೊಡೆದು ಬಡಿದು ನೂಕಿ ಆಕೆ ಬೀಳುವ ಹಾಗೆ ಮಾಡಿದೆ. ಆಕೆ ಸೊಂಟ ಮುರಿದು ನರಳಿ ನರಳಿ ಸತ್ತಳು. ಪಾಪ ಪ್ರಜ್ಞೆ ತನ್ನನ್ನು ಕಾಡುತ್ತಿದೆ' ಎಂದಳು. ಈಗ ನೀನು ಪಶ್ಚಾತ್ತಾಪ ಪಟ್ಟಿರುವೆ. ನಿನ್ನ ನೋವು ಮಾಯವಾಗುವುದು ಎಂದು ಚಿಕಿತ್ಸಕ ಮನೋ ಸೂಚನೆ ಕೊಟ್ಟ. ನೋವು ಕಡಿಮೆಯಾಯಿತು.

ವಾಸ್ತವದಲ್ಲಿ ಈ ಮಹಿಳೆ ತನ್ನ ಅತ್ತೆಯ ಜೊತೆ ಜಗಳವಾಡುತ್ತಿದ್ದಳು. ಇಬ್ಬರಿಗೂ ಬೈದಾಟ, ಹೊಡೆದಾಟವೂ ಆಗುತ್ತಿತ್ತು. ಈ ಜಗಳವನ್ನು ನಿಲ್ಲಿಸಲು ಆಗದೇ ಆಕೆಯ ಗಂಡ ಅಸಹಾಯಕನಾಗಿದ್ದ. ಒಂದು ಸಲ ಜಗಳ ತಾರಕಕ್ಕೆ ಹೋಗಿ ಈ ಮಹಿಳೆ ಅತ್ತೆಯನ್ನು ನೂಕಿ ಬಿಟ್ಟಳು. ಆಕೆ ಬಿದ್ದು ತೊಡೆ ಮೂಳೆ ಮುರಿದು ಮೂರು ತಿಂಗಳು ನರಳಿ ಸತ್ತಿದ್ದಳು. ಈ ಘಟನೆಯಾದ ನಂತರ ಈ